ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

## "ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪತ್ರ"

**ವಿಷಯ :** ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ಅಥವಾ 51495.53 ಚ.ಮೀ ವಿಸ್ತೀರ್ಣದ ಪ್ರದೇಶಕ್ಕೆ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಅಳವಡಿಸಲಾಗಿರುವ ಕಾರಣ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 17(2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುವ ಬಗ್ಗೆ.

**ಉಲ್ಲೇಖ :**

1) ಶ್ರೀ ವೈ.ಸಿ.ಸತೀಶ್ ಕುಮಾರ್, ಶ್ರೀ ಪ್ರಶಾಂತ್ ಪ್ರಿಯಾ, ಶ್ರೀ ಎಂ.ಪೂಬಾಲನ್, ಶ್ರೀಮತಿ ಮೆರಿಲ್ಲಾ ಸ್ಟೇಲ್ಲಾ ಪಿಂಟೋ, ಶ್ರೀ ಡಿ.ಎಂ.ಕೃಷ್ಣಪ್ಪ ಮತ್ತು ಶ್ರೀಮತಿ ನೇತ್ರಾವತಿ ಇವರುಗಳ ಅರ್ಜಿ ಸಂಖ್ಯೆ: 2325, ದಿನಾಂಕ: 19/07/2013.
2) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎಎಲ್‌ಎನ್(ದೇ.ಕ)ಎಸ್‌ಆರ್/19/2012–13, ದಿನಾಂಕ: 13/08/2012 (ಸ.ನಂ.4), ಎಎಲ್‌ಎನ್(ದೇ.ಕ)ಎಸ್‌ಆರ್/95/2012–13, ದಿನಾಂಕ: 20/05/2013 (ಸ.ನಂ 5 & 6), ಎಎಲ್‌ಎನ್(ದೇ.ಕ)ಎಸ್‌ಆರ್/25/2011–12, ದಿನಾಂಕ: 09/08/2012 (ಸ.ನಂ.7/1), ಎಎಲ್‌ಎನ್(ದೇ.ಕ)ಎಸ್‌ಆರ್/57/2012–13, ದಿನಾಂಕ: 27/02/2013 (ಸ.ನಂ.7/2), ಎಎಲ್‌ಎನ್(ದೇ)ಎಸ್‌ಆರ್/220/ 2007–08, ದಿನಾಂಕ:07/08/2008 (ಸ.ನಂ 7/3), ಎಎಲ್‌ಎನ್(ದೇ.ಕ)ಎಸ್‌ಆರ್/58/2012–13, ದಿನಾಂಕ:20/05/2013 (ಸ.ನಂ.8) ಮತ್ತು ಎಎಲ್‌ಎನ್(ದೇ) ಎಸ್‌ಆರ್/201/2007–08, ದಿನಾಂಕ: 30/06/2008 (ಸ.ನಂ 9/2 & 10/2).
3) ದಿನಾಂಕ: 17/09/2013 ರಂದು ನಡೆದ ಪ್ರಾಧಿಕಾರದ 97 ನೇ ಸಭೆಯ ವಿಷಯ ಸಂಖ್ಯೆ 97[3(4)] ರ ನಡಾವಳಿ.
4) ಈ ಪ್ರಾಧಿಕಾರದ ಸಮಸಂಖ್ಯೆ ಶುಲ್ಕಪಾವತಿ ಸೂಚನಾ ಪತ್ರ ಸಂಖ್ಯೆ : 10/10/2013.
5) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 5815 ರ ದಿನಾಂಕ: 19/10/2013 ರಂತೆ ಒಟ್ಟು ರೂ.23,04,000/– (ಇಪ್ಪತ್ಮೂರು ಲಕ್ಷದ ನಾಲ್ಕು ಸಾವಿರ ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.
6) ಪ್ರಸ್ತಾಪಿತ ವಸತಿ ವಿನ್ಯಾಸದಲ್ಲಿ ಬರುವ ರಸ್ತೆ, ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಜಾಗಗಳನ್ನು ಮುಖ್ಯಾಧಿಕಾರಿಗಳು, ದೇವನಹಳ್ಳಿ ಪುರಸಭೆ ರವರಿಗೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸುವ ಸಂಬಂಧ ದೃಢೀಕರಿಸಿರುವ ಪತ್ರ ದಿನಾಂಕ: 21/02/2014.
7) ಮೆ॥ ಮೂಕಾಂಭಿಕ & ಕಂಪನಿ ರವರ ಪರವಾಗಿ ಪಾಲುದಾರರಾದ ಶ್ರೀ ವಿಜಯ್ ಕುಮಾರ್ ಆರ್ ಬಿನ್ ರಾಣ್‌ಮಾಲ್ಲಿ, ಶ್ರೀ ಎನ್.ಬಿ.ಸುರೇಶ್ ಕುಮಾರ್ ಬಿನ್ ಲೇ॥ ಎನ್.ಬಿ.ವೆಂಕಟರಂಗಣ್ಣ, ಶ್ರೀಮತಿ ಉಷಾ ಸತೀಶ್ ಕುಮಾರ್ ಕೋಂ ಲೆ॥ ವೈ.ಸಿ.ಸತೀಶ್ ಕುಮಾರ್ ರವರುಗಳ ಮನವಿ ಪತ್ರ ದಿನಾಂಕ: 10/01/2022.
8) ದಿನಾಂಕ: 19/01/2022 ರಂದು ನಡೆದ ಪ್ರಾಧಿಕಾರದ 133 ನೇ ಸಭೆಯ ವಿಷಯ ಸಂ. 133.95 ರ ನಡಾವಳಿ.

9) ಈ ಪ್ರಾಧಿಕಾರದ ಸಮ ಸಂಖ್ಯೆಯ ಶುಲ್ಕಪಾವತಿ ಸೂಚನಾ ಪತ್ರ ದಿನಾಂಕ: 10/03/2022.

10) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 0011140 ರ ದಿನಾಂಕ: 18/04/2022 ರಂತೆ ಒಟ್ಟು ರೂ.46,140/- (ನಲವತ್ತಾರು ಸಾವಿರದ ಒಂದುನೂರ ನಲವತ್ತು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.

11) ಮೆ॥ ಮೂಕಾಂಭಿಕ & ಕಂಪನಿ ರವರ ಪರವಾಗಿ ಪಾಲುದಾರರಾದ ಶ್ರೀ ವಿಜಯ್ ಕುಮಾರ್ ಆರ್ ಬಿನ್ ರಾಣ್‌ಮಾಲ್ಜಿ, ಶ್ರೀ ಎನ್.ಬಿ.ಸುರೇಶ್ ಕುಮಾರ್ ಬಿನ್ ಲೇ॥ ಎನ್.ಬಿ.ವೆಂಕಟರಂಗಣ್ಣ, ಶ್ರೀಮತಿ ಉಷಾ ಸತೀಶ್ ಕುಮಾರ್ ಕೋಂ ಲೇ॥ ವೈ.ಸಿ.ಸತೀಶ್ ಕುಮಾರ್, ಶ್ರೀಮತಿ ಲಕ್ಷ್ಮಮ್ಮ ಕೋಂ ಲೇ॥ ಕೃಷ್ಣಪ್ಪ, ಶ್ರೀ ಮಂಜುನಾಥ ಬಿನ್ ಲೇ॥ ಕೃಷ್ಣಪ್ಪ, ಶ್ರೀ ಶ್ರೀನಿವಾಸ ಬಿನ್ ಲೇ॥ ಕೃಷ್ಣಪ್ಪ, ಶ್ರೀ ಚಂದ್ರ ಬಿನ್ ಲೇ॥ ಕೃಷ್ಣಪ್ಪ, ಶ್ರೀಮತಿ ಸುನಂದ ಬಿನ್ ಲೇ॥ ಕೃಷ್ಣಪ್ಪ, ಶ್ರೀ ಭರತರಾಜ ಬಿನ್ ಲೇ॥ ಕೃಷ್ಣಪ್ಪ ಹಾಗೂ ಶ್ರೀ ನಾಗರಾಜ್ ಬಿನ್ ಲೇ॥ ಕೃಷ್ಣಪ್ಪ ರವರುಗಳ ಮನವಿ ಪತ್ರ ದಿನಾಂಕ: 28/11/2022.

12) ದಿನಾಂಕ: 29/11/2022 ರಂದು ನಡೆದ ಪ್ರಾಧಿಕಾರದ 135 ನೇ ಸಭೆಯ ವಿಷಯ ಸಂ. 135.114 ರ ನಡಾವಳಿ.

13) ಈ ಪ್ರಾಧಿಕಾರದ ಸಮ ಸಂಖ್ಯೆ ಶುಲ್ಕಪಾವತಿ ಸೂಚನಾ ಪತ್ರ ದಿನಾಂಕ: 31/12/2022.

14) ಅರ್ಜಿದಾರರು ರೈಲ್ವೆ ಇಲಾಖೆಯಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿದ ಮನವಿ ಪತ್ರ ದಿನಾಂಕ: 04/01/2023.

15) ಅರ್ಜಿದಾರರು ಶುಲ್ಕಗಳನ್ನು ಪಾವತಿಸಿದ ರಶೀದಿ ಸಂಖ್ಯೆ: 0011963 ರ ದಿನಾಂಕ: 20/01/2023 ರಂತೆ ಒಟ್ಟು ರೂ.51,500/- (ಐವತ್ತೊಂದು ಸಾವಿರದ ಐದುನೂರು ರೂಪಾಯಿಗಳು ಮಾತ್ರ) ರಂತೆ ಶುಲ್ಕಗಳನ್ನು ಪಾವತಿಸಿರುತ್ತಾರೆ.

16) ಈ ಪ್ರಾಧಿಕಾರದ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಆದೇಶ ಪತ್ರ ಸಂ: ಬಿಐಎಎಪಿಎ/ಟಿಪಿ02/ಎಲ್‌ಎಓ/152/2013-14/2425, ದಿ: 24/01/2023.

17) M/s Theme Ambience Roi Projects Pvt Ltd, M/s Prithvi Infrastructure, M/s Parasmani Developers & M/s P.B.Metlloy Exim LLP., ರವರುಗಳು ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ಕೋರಿ ಸಲ್ಲಿಸಿರುವ ಮನವಿ ಪತ್ರ ದಿನಾಂಕ: 16/12/2023.

18) ದಿನಾಂಕ: 18/12/2023 ರಂದು ನಡೆದ ಪ್ರಾಧಿಕಾರದ 140 ನೇ ಸಭೆಯ ವಿಷಯ ಸಂ. 140.31 ರ ನಡಾವಳಿ.

19) ಈ ಪ್ರಾಧಿಕಾರದ ಸಮಸಂಖ್ಯೆಯ ಶುಲ್ಕಪಾವತಿ ಸೂಚನಾ ಪತ್ರ ದಿನಾಂಕ: 02/02/2024.

20) ಅರ್ಜಿದಾರರು ಪ್ರಾಧಿಕಾರದ ರಶೀದಿ ಸಂಖ್ಯೆ: 0013004 ರ ದಿನಾಂಕ: 26/02/2024 ರಂತೆ ರೂ. 26,250/- (ಇಪ್ಪತ್ತಾರು ಸಾವಿರದ ಎರಡು ನೂರ ಐವತ್ತು ರೂಪಾಯಿಗಳು ಮಾತ್ರ) ಗಳನ್ನು ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

21) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 24 ಶಾಸನ 2015, ಬೆಂಗಳೂರು ದಿನಾಂಕ: 10/09/2015 ಮತ್ತು ಡಿಪಿಎಎಲ್36ಶಾಸನ 2021, ಬೆಂಗಳೂರು ದಿನಾಂಕ: 07/10/2021.

...ರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, ಮೊದಲನೇ ಮಹಡಿ, ವಿ.ಜಿ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110
ದೂ. : 080–29566001, 080–27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

***********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ ವೈ.ಸಿ.ಸತೀಶ್ ಕುಮಾರ್, ಶ್ರೀ ಪ್ರಶಾಂತ್ ಪ್ರಿಯಾ, ಶ್ರೀ ಎಂ.ಪೂಬಾಲನ್, ಶ್ರೀಮತಿ ಮೆರಿಲ್ಲಾ ಸ್ಟೇಲ್ಲಾ ಪಿಂಟೋ, ಶ್ರೀ ಡಿ.ಎಂ.ಕೃಷ್ಣಪ್ಪ ಮತ್ತು ಶ್ರೀಮತಿ ನೇತ್ರಾವತಿ ರವರುಗಳು ಉಲ್ಲೇಖ (1) ರ ಅರ್ಜಿಯಲ್ಲಿ ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ಅಥವಾ 51496.29 ಚ.ಮೀ ವಿಸ್ತೀರ್ಣ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲು ಕೋರಿದ್ದರು.

ಪ್ರಶ್ನಿತ ಜಮೀನುಗಳು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಳೀಯ ಯೋಜನಾ ಪ್ರದೇಶದ ಅನುಮೋದಿತ ಮಹಾಯೋಜನೆ–2021 ರಲ್ಲಿ "ವಸತಿ, ಭಾಗಶಃ ವ್ಯವಸಾಯ ಹಾಗೂ ಪ್ರಸ್ತಾಪಿತ 12.00 ಮೀ ಅಗಲದ ರಸ್ತೆ ಪಂಕ್ತೀಕರಣ" ಭೂಉಪಯೋಗ ವಲಯದಲ್ಲಿ ಇರುತ್ತದೆ. ಸಲ್ಲಿಸಿರುವ ಗ್ರಾಮ ನಕ್ಷೆ & ಸರ್ವೆ ನಕ್ಷೆಗಳನ್ವಯ ಪ್ರಶ್ನಿತ ಜಮೀನುಗಳಲ್ಲಿ ರಾಷ್ಟ್ರೀಯ ಹೆದ್ದಾರಿ–7 ರಿಂದ ದೊಡ್ಡಅಮಾನಿಕೆರೆಗೆ ಹೋಗುವ ಹಾಲಿ ರಸ್ತೆ ಇರುತ್ತದೆ. ಅನುಮೋದಿತ ಮಹಾಯೋಜನೆಯ–2021 ರನ್ವಯ ಪ್ರಶ್ನಿತ ಜಮೀನುಗಳಲ್ಲಿ ಪ್ರಸ್ತಾಪಿತ 12.00 ಮೀ ಅಗಲದ ಪ್ರಸ್ತಾಪಿತ ರಸ್ತೆ ಪಂಕ್ತೀಕರಣ ಇರುತ್ತದೆ. ಹಾಲಿ ರಸ್ತೆ ಪಂಕ್ತೀಕರಣ ಮತ್ತು ಅನುಮೋದಿತ ಮಹಾಯೋಜನೆ ನಕ್ಷೆಯಲ್ಲಿ ರಸ್ತೆ ಪಂಕ್ತೀಕರಣ (ಪರಿಚಲನೆ) ವ್ಯತ್ಯಾಸವಾಗಿರುತ್ತದೆ. ಇಂತಹ ನ್ಯೂನ್ಯತೆಗಳಿದ್ದಲ್ಲಿ ವಲಯ ನಿಯಮಾವಳಿಯನ್ವಯ ಪುಟ ಸಂಖ್ಯೆ (75) ರಲ್ಲಿನ ಕಂಡಿಕೆ 'ಜೆ' ರಲ್ಲಿ "If the alignment of the existing Road is shifted in the master plan, the existing road as on ground reality/cadstral map may be considered for the propsed road widening. The landuse facing the Road shall be considered accordingly" ಎಂದು ಸೂಚಿಸಲಾಗಿರುತ್ತದೆ. ಅದರಂತೆ, ಪ್ರಶ್ನಿತ ಜಮೀನುಗಳು ವಸತಿ ಹಾಗೂ ಭಾಗಶಃ ವ್ಯವಸಾಯ ವಲಯದಲ್ಲಿ ಇರುತ್ತದೆ ಎಂದು ಹಾಗೂ ಪ್ರಶ್ನಿತ ವಸತಿ ವಿನ್ಯಾಸದಲ್ಲಿ ಗ್ರಾಮ ನಕ್ಷೆಯಂತೆ ಹಾಲಿ ಇರುವ ರಸ್ತೆ ಪಂಕ್ತೀಕರಣವನ್ನು ಮತ್ತು ರೈಲ್ವೆಮಾರ್ಗದ ಅಂಚಿನಲ್ಲಿ 15.00 ಮೀ ಅಗಲದ ಸೇವಾ ರಸ್ತೆ ಪಂಕ್ತೀಕರಣ ಪರಿಗಣಿಸಲಾಗಿರುತ್ತದೆ. ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯಲ್ಲಿ ವ್ಯವಸಾಯ ಭೂಪಯೋಗ ವಲಯದಲ್ಲಿ ಉದ್ಯಾನವನ ಮತ್ತು ರಸ್ತೆಯನ್ನು ಅಳವಡಿಸಲಾಗಿರುತ್ತದೆ. ಉಲ್ಲೇಖ (2) ರ ಅಧಿಕೃತ ಜ್ಞಾಪನ ಪತ್ರಗಳಂತೆ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರಿಂದ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾಗಿರುತ್ತದೆ.

ಪ್ರಸ್ತಾವನೆ ಸಂಬಂಧ ಉಲ್ಲೇಖ (3) ರ ದಿನಾಂಕ: 17/09/2013 ರಂದು ನಡೆದ ಪ್ರಾಧಿಕಾರದ 97 ನೇ ಸಭೆಯ ವಿಷಯ ಸಂಖ್ಯೆ 97[3(4)] ರ ನಡಾವಳಿಯಲ್ಲಿ ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ವಿಸ್ತೀರ್ಣ ಪ್ರದೇಶದ ಜಮೀನುಗಳಲ್ಲಿ 'ವಸತಿ' ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ, ವಸತಿ ವಿನ್ಯಾಸದಲ್ಲಿನ ನಿವೇಶನಗಳ ಪೈಕಿ ಮೊದಲನೇ ಹಂತದಲ್ಲಿ ಶೇ 40 ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಲು ತೀರ್ಮಾನಿಸಲಾಗಿತ್ತು.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆಗೆ ಸಂಬಂಧಿಸಿದಂತೆ, ಉಲ್ಲೇಖ (4) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸುವಂತೆ ತಿಳಿಸಲಾಗಿರುವ ಹಿನ್ನಲೆಯಲ್ಲಿ ಅರ್ಜಿದಾರರು ಉಲ್ಲೇಖ (5) ರಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿದ್ದು, ಪ್ರಸ್ತಾಪಿತ ವಸತಿ ವಿನ್ಯಾಸದಲ್ಲಿ ಬರುವ ರಸ್ತೆ, ಉದ್ಯಾನವನ ಹಾಗೂ ನಾಗರೀಕ ಸೌಲಭ್ಯ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಜಾಗಗಳನ್ನು ಮುಖ್ಯಾಧಿಕಾರಿಗಳು, ದೇವನಹಳ್ಳಿ ಪುರಸಭೆ ರವರಿಗೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಲು ಅರ್ಜಿದಾರರಿಗೆ ಉಲ್ಲೇಖ (6) ರ ಈ ಕಛೇರಿಯ ಪತ್ರದಲ್ಲಿ ಪರಿತ್ಯಾಜನಾ ಪತ್ರಗಳನ್ನು

ದೃಢೀಕರಿಸಲಾಗಿತ್ತು. ಆದರೆ ಅರ್ಜಿದಾರರು ಪರಿತ್ಯಾಜನಾ ಪತ್ರಗಳನ್ನು ನೋಂದಾಯಿಸಿರುವುದಿಲ್ಲ ಹಾಗೂ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದುಕೊಂಡಿರುವುದಿಲ್ಲ.

ಮೆ॥ ಮೂಕಾಂಭಿಕ & ಕಂಪನಿ ರವರ ಪರವಾಗಿ ಪಾಲುದಾರರಾದ ಶ್ರೀ ವಿಜಯ್ ಕುಮಾರ್ ಆರ್ ಬಿನ್ ರಾಣ್‌ಮಾಲ್ಜಿ, ಶ್ರೀ ಎನ್.ಬಿ.ಸುರೇಶ್ ಕುಮಾರ್ ಬಿನ್ ಲೇ॥ ಎನ್.ಬಿ.ವೆಂಕಟರಂಗಣ್ಣ, ಶ್ರೀಮತಿ ಉಷಾ ಸತೀಶ್ ಕುಮಾರ್ ಕೋಂ ಲೆ॥ ವೈ.ಸಿ.ಸತೀಶ್ ಕುಮಾರ್ ರವರು ಉಲ್ಲೇಖ (7) ರಂತೆ ಮನವಿ ಸಲ್ಲಿಸಿ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/3 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 11ಎ–16ಗು ಅಥವಾ 46133.52 ಚ.ಮೀ ವಿಸ್ತೀರ್ಣ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಕೋರಲಾಗಿತ್ತು.

ಸರ್ಕಾರದ ಅದಿಸೂಚನೆ ಸಂಖ್ಯೆ: ಸಂವ್ಯಶಾಇ24 ಶಾಸನ2015, ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2)(ಎ) ರಂತೆ ಸದರಿ ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (8) ರ ದಿನಾಂಕ: 19/01/2022 ರಂದು ನಡೆದ ಪ್ರಾಧಿಕಾರದ 133 ನೇ ಸಭೆಯ ವಿಷಯ ಸಂ. 133.95 ರ ನಡಾವಳಿಯಲ್ಲಿ ಪ್ರಶ್ನಿತ ಜಮೀನುಗಳ ಬಳಿಯಲ್ಲಿನ ರೈಲು ಮಾರ್ಗದ ಅಂಚಿನಲ್ಲಿ ಸಲ್ಲಿಸಿರುವ ಸರ್ವೆ ನಕ್ಷೆಯ ರೀತ್ಯ ಹಾಲಿ ರೈಲ್ವೆ ರಸ್ತೆ ಪಂಕ್ತೀಕರಣದಲ್ಲಿ ಪ್ರಸ್ತಾಪಿತ 15.00 ಮೀ ಅಗಲದ ಮಹಾಯೋಜನೆ ರಸ್ತೆಯನ್ನು & ರೈಲ್ವೆ ಮಾರ್ಗದ ಎಲ್ಲೆಯಿಂದ ನಿಯಮಾವಳಿಗಳ ರೀತ್ಯ ಕನಿಷ್ಠ 30.00 ಮೀ ಅಂತರದ ರೈಲ್ವೆ ಬಫರ್ ಕಾಯ್ದಿರಿಸುವ; ಪ್ರಶ್ನಿತ ಜಮೀನುಗಳಲ್ಲಿ 'ಬಿ' ಖರಾಬು ಕಾಲುದಾರಿ ಪಂಕ್ತೀಕರಣ & ಈ ಖರಾಬು ಪಂಕ್ತೀಕರಣದಲ್ಲಿ ಅಭಿವೃದ್ಧಿಯಾಗಿರುವ ಹಾಲಿ ರಸ್ತೆ ಪಂಕ್ತೀಕರಣದ ಪಥ ಬದಲಾವಣೆ ಕುರಿತು ಕಂದಾಯ ಇಲಾಖೆಯ ಜಿಲ್ಲಾಧಿಕಾರಿಗಳುರವರಿಂದ ಪಥ ಬದಲಾವಣೆ ಆದೇಶ ಸಲ್ಲಿಸಿದ ನಂತರ ಅಥವಾ ಇಲ್ಲವಾದಲ್ಲಿ ಗ್ರಾಮ ನಕ್ಷೆ & ಸರ್ವೆ ನಕ್ಷೆ ಅನುಸಾರ ಖರಾಬು, ಹಾಲಿ ರಸ್ತೆ ಪಂಕ್ತೀಕರಣ & ಈ ಹಾಲಿ ರಸ್ತೆ ಪಂಕ್ತೀಕರಣದಲ್ಲಿ ಮಹಾಯೋಜನೆಯ ಪ್ರಸ್ತಾಪಿತ 12.00 ಮೀ ಅಗಲದ ರಸ್ತೆ ಪಂಕ್ತೀಕರಣ ಗುರುತಿಸಿ, ವಲಯ ನಿಯಮಾವಳಿಗಳ ಅನುಸಾರ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯನ್ನು ಸಲ್ಲಿಸಿದ ನಂತರ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/3 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 11ಎ–16ಗು ಅಥವಾ 46133.52 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2)(ಎ)ರ ಅಡಿಯಲ್ಲಿ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆಗೆ ಸಂಬಂಧಿಸಿದಂತೆ, ಉಲ್ಲೇಖ (9) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ತಿಳಿಸಲಾಗಿರುವ ಹಿನ್ನಲೆಯಲ್ಲಿ ಅರ್ಜಿದಾರರು ಉಲ್ಲೇಖ (10) ರಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿರುತ್ತಾರೆ. ಆದರೆ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ಪಡೆದುಕೊಂಡಿರುವುದಿಲ್ಲ.

ಉಲ್ಲೇಖ (11) ರಂತೆ ಮೆ॥ ಮೂಕಾಂಭಿಕ & ಕಂಪನಿ ರವರ ಪರವಾಗಿ ಪಾಲುದಾರರಾದ ಶ್ರೀ ವಿಜಯ್ ಕುಮಾರ್ ಆರ್ ಬಿನ್ ರಾಣ್‌ಮಾಲ್ಜಿ, ಶ್ರೀ ಎನ್.ಬಿ.ಸುರೇಶ್ ಕುಮಾರ್ ಬಿನ್ ಲೇ॥ ಎನ್.ಬಿ.ವೆಂಕಟರಂಗಣ್ಣ, ಶ್ರೀಮತಿ ಉಷಾ ಸತೀಶ್ ಕುಮಾರ್ ಕೋಂ ಲೇ॥ ವೈ.ಸಿ.ಸತೀಶ್ ಕುಮಾರ್, ಶ್ರೀಮತಿ ಲಕ್ಷ್ಮಮ್ಮ ಕೋಂ ಲೇ॥ ಕೃಷ್ಣಪ್ಪ, ಶ್ರೀ ಮಂಜುನಾಥ ಬಿನ್ ಲೇ॥ ಕೃಷ್ಣಪ್ಪ, ಶ್ರೀ ಶ್ರೀನಿವಾಸ ಬಿನ್ ಲೇ॥ ಕೃಷ್ಣಪ್ಪ, ಶ್ರೀ ಚಂದ್ರ ಬಿನ್ ಲೇ॥ ಕೃಷ್ಣಪ್ಪ, ಶ್ರೀಮತಿ ಸುನಂದ ಬಿನ್ ಲೇ॥ ಕೃಷ್ಣಪ್ಪ, ಶ್ರೀ ಭರತರಾಜ ಬಿನ್ ಲೇ॥ ಕೃಷ್ಣಪ್ಪ ಹಾಗೂ ಶ್ರೀ ನಾಗರಾಜ್ ಬಿನ್ ಲೇ॥ ಕೃಷ್ಣಪ್ಪ

ರವರುಗಳು ಜಂಟಿಯಾಗಿ ಅರ್ಜಿ ಸಲ್ಲಿಸಿ, ರೈಲ್ವೆ ಇಲಾಖೆಯ ಆಕ್ಷೇಪಣಾ ರಹಿತ ಪತ್ರ ಸಂಖ್ಯೆ: B/W-278/NOC/Shri.M.Poobalam/1006, Dated:02/01/2020 (Sy No.5), B/W-278/NOC/Shri.G.N. Venugopal/ 1004, Dated: 02/01/2020 (Sy No.4 & 7/1) & B/W-278/NOC/ Shri.Y.C.Sathish Kumar/1005, Dated: 02/01/2020 (Sy No.7/3 & 9/2) ರಲ್ಲಿ ಸೂಚಿಸಿರುವಂತೆ, ರೈಲ್ವೆ ಬೌಂಡರಿಯಿಂದ 15.00 ಮೀ ರೈಲ್ವೆ ಮಾರ್ಜಿನ್ ಕಾಯ್ದಿರಿಸಿ, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ಅಥವಾ 51496.29 ಚ.ಮೀ ವಿಸ್ತೀರ್ಣ ಪ್ರದೇಶದ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ಕೋರಿರುತ್ತಾರೆ.

ಸರ್ಕಾರದ ಅದಿಸೂಚನೆ ಸಂಖ್ಯೆ: ಸಂವ್ಯಶಾಇ24 ಶಾಸನ2015, ದಿನಾಂಕ: 10/09/2015 ರನ್ವಯ ಕಾಯ್ದೆಗೆ ತಿದ್ದುಪಡಿಯಾಗಿರುವಂತೆ ಕೆಟಿಸಿಪಿ ಕಾಯ್ದೆ 1961 ರ ಪ್ರಕರಣ 17(2)(ಎ) ರಂತೆ ಸದರಿ ವಸತಿ ವಿನ್ಯಾಸಕ್ಕೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (12) ರ ದಿನಾಂಕ: 29/11/2022 ರಂದು ನಡೆದ ಪ್ರಾಧಿಕಾರದ 135 ನೇ ಸಭೆಯ ವಿಷಯ ಸಂ. 135.114 ರ ನಡಾವಳಿಯಲ್ಲಿ ಸಲ್ಲಿಸಿರುವ ವಸತಿ ವಿನ್ಯಾಸ ನಕ್ಷೆಯು ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುವುದನ್ನು ಸಭೆಯಲ್ಲಿ ಗಮನಿಸಿ, ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ರೈಲ್ವೆ ಇಲಾಖೆಯವರು ನೀಡಿರುವ ಆಕ್ಷೇಪಣಾ ರಹಿತ ಪತ್ರದಲ್ಲಿನ ಷರತ್ತು ಸಂಖ್ಯೆ 10 ರಲ್ಲಿ ಸೂಚಿಸಿರುವಂತೆ ರೈಲ್ವೆ ಬೌಂಡರಿಯಿಂದ 30.00 ಮೀ ಅಂತರದೊಳಗೆ ಬರುವ ಎಲ್ಲಾ ನಿವೇಶನಗಳಲ್ಲಿ ಕಟ್ಟಡ ಕಟ್ಟುವ ಸಂಬಂಧ ರೈಲ್ವೆ ಇಲಾಖೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟು, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ಅಥವಾ 51496.29 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ ಸಾಮಾನ್ಯ ಷರತ್ತುಗಳಿಗೆ ಒಳಪಡಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆಗೆ ಸಂಬಂಧಿಸಿದಂತೆ, ಉಲ್ಲೇಖ (13) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿರುವ ಹಿನ್ನಲೆಯಲ್ಲಿ, ಅರ್ಜಿದಾರರು ಉಲ್ಲೇಖ (14) ರ ಮನವಿ ಪತ್ರದೊಂದಿಗೆ ರೈಲ್ವೆ ಇಲಾಖೆ ರವರ ನಿರಾಕ್ಷೇಪಣಾ ಪತ್ರ ಸಂಖ್ಯೆ: ಬಿ.ಡಬ್ಲ್ಯೂ–278/ಎನ್‌ಓಸಿ/ಜಿಇಎನ್, ದಿನಾಂಕ: 03/01/2023 ರಂದು ಪಡೆದ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಿದ್ದು, ಸದರಿ ಪತ್ರದಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಲಾಗಿರುತ್ತದೆ.

*"NOC was given for the construction of compound wall and formation of layout only, in case any type of new construction Building/Structure on the same land you are requested to obtain fresh NOC with all the formalities.*

*It is to be brought to your notice that the above No Objection Certificate was issued from Railways for construction of layout only further any dwelling / Structures/ Compound wall at parties land / plot within 30 mtrs (100' - 00'') from the Railway boundary the fresh NOC to be obtained.*

*Further, in view of above it is to clarify that NOC's issued on 02/01/2020 by Railways for construction of Compound wall for formation of residential Layout are valid."*

ಉಲ್ಲೇಖ (15) ರಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಹಾಗೂ ವಸತಿ ವಿನ್ಯಾಸ ನಕ್ಷೆಯ ನೀಲಿ ನಕ್ಷೆಗಳನ್ನು ಅನುಮೋದನೆಗಾಗಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಈ ಪ್ರಾಧಿಕಾರದಿಂದ ಉಲ್ಲೇಖ (16) ರಂತೆ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆಯನ್ನು ನೀಡಲಾಗಿರುತ್ತದೆ.

ಉಲ್ಲೇಖ (17) ರಂತೆ M/s Theme Ambience Roi Projects Pvt Ltd, M/s Prithvi Infrastructure, M/s Parasmani Developers & M/s P.B.Metlloy Exim LLP., ರವರುಗಳು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಸದರಿ ಜಮೀನುಗಳನ್ನು ಹಿಂದಿನ ಮಾಲೀಕರುಗಳಿಂದ ನೋಂದಾಯಿತ ಕ್ರಯಪತ್ರದ ಮೂಲಕ ಮಾಲೀಕತ್ವ ಪಡೆದಿರುತ್ತೇನೆ. ಅಲ್ಲದೇ, ಈ ಹಿಂದೆ ಅನುಮೋದನೆ ನೀಡಲಾಗಿದ್ದ ತಾತ್ಕಾಲಿಕ ಅನುಮೋದಿತ ವಸತಿ ವಿನ್ಯಾಸ ನಕ್ಷೆಯಲ್ಲಿ ಕೆಲವು ಬದಲಾವಣೆಗಳನ್ನು ಅಳವಡಿಸಿರುವ ಕಾರಣ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಲು ನೀಡಲು ಕೋರಿರುತ್ತಾರೆ.

ಪ್ರಸ್ತಾವನೆಯ ಬಗ್ಗೆ ಉಲ್ಲೇಖ (18) ರಲ್ಲಿನ ದಿನಾಂಕ: 18/12/2023 ರಂದು ನಡೆದ ಪ್ರಾಧಿಕಾರದ 140 ನೇ ಸಭೆಯ ವಿಷಯ ಸಂ. 140.31 ರಲ್ಲಿ ಮಂಡಿಸಲಾಗಿದ್ದು, ಸಭೆಯಲ್ಲಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯು ಅನುಮೋದಿತ ಮಹಾಯೋಜನೆಯ ವಲಯ ನಿಯಮಾವಳಿಗಳಿಗೆ ಪರಿಷ್ಕರಿಸಿಕೊಂಡು, ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ರೈಲ್ವೆ ಇಲಾಖೆಯವರು ನೀಡಿರುವ ಆಕ್ಷೇಪಣಾ ರಹಿತ ಪತ್ರದಲ್ಲಿನ ಷರತ್ತು ಸಂಖ್ಯೆ 10 ರಲ್ಲಿ ಸೂಚಿಸಿರುವಂತೆ ರೈಲ್ವೆ ಬೌಂಡರಿಯಿಂದ 30.00 ಮೀ ಅಂತರದೊಳಗೆ ಬರುವ ಎಲ್ಲಾ ನಿವೇಶನಗಳಲ್ಲಿ ಕಟ್ಟಡ ಕಟ್ಟುವ ಸಂಬಂಧ ರೈಲ್ವೆ ಇಲಾಖೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟು, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ಅಥವಾ 51496.29 ಚ.ಮೀ ವಿಸ್ತೀರ್ಣದ ಪ್ರದೇಶದಲ್ಲಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಪ್ರಾಧಿಕಾರದ ಸಾಮಾನ್ಯ ಷರತ್ತುಗಳಿಗೆ ಒಳಪಡಿಸಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17 (2ಎ) ರ ಅಡಿಯಲ್ಲಿ ತಾತ್ಕಾಲಿಕ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ.

ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡುವ ಸಂಬಂಧ ಉಲ್ಲೇಖ (19) ರ ಈ ಕಛೇರಿಯ ಶುಲ್ಕ ಪಾವತಿ ಸೂಚನಾ ಪತ್ರದಲ್ಲಿ ನಿಗಧಿತ ಶುಲ್ಕಗಳನ್ನು ಪಾವತಿಸಲು ಸೂಚಿಸಲಾಗಿರುವ ಹಿನ್ನೆಲೆಯಲ್ಲಿ, ಉಲ್ಲೇಖ (20) ರಂತೆ ನಿಗಧಿತ ಶುಲ್ಕಗಳನ್ನು ಪಾವತಿಸಿ, ಅಗತ್ಯ ದಾಖಲೆಗಳನ್ನು ಹಾಗೂ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯ ನೀಲಿ ಪ್ರತಿಗಳನ್ನು ಸಲ್ಲಿಸಿ, ಅನುಮೋದನೆ ನೀಡಲು ಕೋರಿರುತ್ತಾರೆ.

ಮೇಲ್ಕಂಡ ಅಂಶಗಳನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ/157/ಬಿಎಂಆರ್/2005 ದಿನಾಂಕ: 27/01/2009 ಮತ್ತು ತಿದ್ದುಪಡಿ ಆದೇಶ ದಿನಾಂಕ: 29/01/2009 ರಲ್ಲಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಗೊಂಡಿರುವ ಮಹಾಯೋಜನೆಯ ವಲಯ ನಿಯಮಾವಳಿಗಳ ಅನುಸಾರ, ಉಲ್ಲೇಖ (18) ರ ಪ್ರಾಧಿಕಾರದ ಸಭೆಯ ನಡಾವಳಿಯ ರೀತ್ಯ ಹಾಗೂ ಉಲ್ಲೇಖ (21) ರ ಸರ್ಕಾರದ ಅಧಿಸೂಚನೆಗಳನ್ವಯ, ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ರೈಲ್ವೆ ಇಲಾಖೆಯವರು ನೀಡಿರುವ ಆಕ್ಷೇಪಣಾ ರಹಿತ ಪತ್ರದಲ್ಲಿನ ಷರತ್ತು ಸಂಖ್ಯೆ 10 ರಲ್ಲಿ ಸೂಚಿಸಿರುವಂತೆ ರೈಲ್ವೆ ಬೌಂಡರಿಯಿಂದ 30.00 ಮೀ ಅಂತರದೊಳಗೆ ಬರುವ ಎಲ್ಲಾ

ನಿವೇಶನಗಳಲ್ಲಿ ಕಟ್ಟಡ ಕಟ್ಟುವ ಸಂಬಂಧ ರೈಲ್ವೆ ಇಲಾಖೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟು, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ಅಥವಾ 51496.29 ಚ.ಮೀ ವಿಸ್ತೀರ್ಣ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 17(2ಎ)ರ ರನ್ವಯ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ನೀಡಲು ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ

**ಸಂ. ಬಿಐಎಎಪಿಎ/ಟಿಪಿ02/ಎಲ್‌ಎಒ/152/2013–14/2023–24** | 2595 **ದಿನಾಂಕ:** – 7 MAR 2024

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ (ತಿದ್ದುಪಡಿ) ಕಾಯ್ದೆ 2015 ರ ಕಲಂ 17(2) (ಎ) ರಡಿಯಲ್ಲಿ ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ರೈಲ್ವೆ ಇಲಾಖೆಯವರು ನೀಡಿರುವ ಆಕ್ಷೇಪಣಾ ರಹಿತ ಪತ್ರದಲ್ಲಿನ ಷರತ್ತು ಸಂಖ್ಯೆ 10 ರಲ್ಲಿ ಸೂಚಿಸಿರುವಂತೆ ರೈಲ್ವೆ ಬೌಂಡರಿಯಿಂದ 30.00 ಮೀ ಅಂತರದೊಳಗೆ ಬರುವ ಎಲ್ಲಾ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಸಂಬಂಧ ರೈಲ್ವೆ ಇಲಾಖೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟು, ದೇವನಹಳ್ಳಿ ತಾಲ್ಲೂಕು, ಕಸಬಾ ಹೋಬಳಿ, ಉಪ್ಪಾರಹಳ್ಳಿ ಗ್ರಾಮದ ಸ.ನಂ. 4 ರಲ್ಲಿ 1ಎ–16ಗು, 5 ರಲ್ಲಿ 1ಎ–08ಗು, 6 ರಲ್ಲಿ 0ಎ–23ಗು, 7/1 ರಲ್ಲಿ 2ಎ–36ಗು, 7/2 ರಲ್ಲಿ 0ಎ–24ಗು, 7/3 ರಲ್ಲಿ 0ಎ–29ಗು, 8 ರಲ್ಲಿ 0ಎ–29ಗು, 9/2 ರಲ್ಲಿ 3ಎ–15ಗು, 10/2 ರಲ್ಲಿ 1ಎ–09ಗು ಒಟ್ಟು 12ಎ–29ಗು ಅಥವಾ 51496.29 ಚ.ಮೀ ವಿಸ್ತೀರ್ಣ ಪ್ರದೇಶವನ್ನು ಮಟ್ಟ ಮಾಡುವುದು, ನೆಲಗಟ್ಟ ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲುಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿ ದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಗಳನ್ನೊಳಗೊಂಡಂತೆ ನಿವೇಶನಗಳು ರಸ್ತೆ ಪಂಕ್ತೀಕರಣ, ಉದ್ಯಾನವನ, ನಾಗರೀಕ ಸೌಲಭ್ಯ, ಮತ್ತು ನಾಲಾ ಪ್ರದೇಶ ಮಳೆನೀರು ಸಂಗ್ರಹಣೆ ಘಟಕ (Rain water Harvesting), Sewage Treatment Plant (ಘನತ್ಯಾಜ್ಯ ನೀರು ಸಂಸ್ಕರಣಾ ಘಟಕ)/ ಸೋಕ್‌ಪಿಟ್ ಮತ್ತು ಯಾವುದೇ ಇತರೆ ಮೂಲ ಸೌಕರ್ಯವನ್ನು ತೋರಿಸಿ ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ಮಾತ್ರ ಈ ಕೆಳಕಂಡ ನಿಬಂಧನೆಗಳಿಗೆ ಒಳಪಡಿಸಿ, ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ "ತಾತ್ಕಾಲಿಕ ಅನುಮೋದನೆ" ನೀಡಲಾಗಿದೆ.

## – : ನಿಬಂಧನೆಗಳು :–

1) ಪ್ರಾಧಿಕಾರದ ತಾತ್ಕಾಲಿಕ ವಸತಿ ವಿನ್ಯಾಸ ಅನುಮೋದನೆ ಆದೇಶ ಪತ್ರ ಸಂಖ್ಯೆ: ಬಿಐಎಎಪಿಎ/ಟಿಪಿ02/ಎಲ್‌ಎಒ/152/2013–14/2425, ದಿ: 24/01/2023 ರಂದು ನೀಡಲಾಗಿರುವ ವಸತಿ ವಿನ್ಯಾಸ ನಕ್ಷೆ ಅನುಮೋದನೆಯನ್ನು ರದ್ದುಪಡಿಸಲಾಗಿದೆ.
2) ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ರೈಲ್ವೆ ಇಲಾಖೆಯವರು ನೀಡಿರುವ ಆಕ್ಷೇಪಣಾ ರಹಿತ ಪತ್ರದಲ್ಲಿನ ಷರತ್ತು ಸಂಖ್ಯೆ 10 ರಲ್ಲಿ ಸೂಚಿಸಿರುವಂತೆ ರೈಲ್ವೆ ಬೌಂಡರಿಯಿಂದ 30.00 ಮೀ ಅಂತರದೊಳಗೆ ಬರುವ ಎಲ್ಲಾ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಸಂಬಂಧ ರೈಲ್ವೆ ಇಲಾಖೆಯಿಂದ ಕಡ್ಡಾಯವಾಗಿ ನಿರಾಕ್ಷೇಪಣಾ ಪತ್ರ ಪಡೆದು ಸಲ್ಲಿಸುವ ಷರತ್ತಿಗೊಳಪಟ್ಟಿರುತ್ತದೆ.
3) ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ 02 ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಪರಿಷ್ಕೃತ ವಸತಿ ವಿನ್ಯಾಸ ಅಭಿವೃದ್ಧಿ ಕಾರ್ಯ ಪೂರ್ಣಗೊಳಿಸದಿದ್ದಲ್ಲಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆ ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
4) ಪ್ರಾಧಿಕಾರಕ್ಕೆ ಸಮಾಧಾನವಾಗುವಂತೆ ಮಟ್ಟ ಮಾಡುವುದು, ನೆಲಗಟ್ಟು ಹಾಸುವುದು, ಜಲ್ಲಿಕಲ್ಲನ್ನು ಹಾಸುವುದು, ಕಲ್ಲು ಚಪ್ಪಡಿ ಹಾಕುವುದು, ನಾಲೆಗಳ ನಿರ್ಮಾಣ, ಚರಂಡಿಗಳ ನಿರ್ಮಾಣ, ಮೋರಿಗಳ ನಿರ್ಮಾಣ, ಬೀದಿದೀಪದ ವ್ಯವಸ್ಥೆ ಮತ್ತು ನೀರು ಸರಬರಾಜಿಗೆ ಮಾಡಬೇಕಾದ ವ್ಯವಸ್ಥೆಯನ್ನೊಳಗೊಂಡಂತೆ ನಿವೇಶನಗಳು,

2



Housiey.com

ರಸ್ತೆ ಪಂಕ್ತೀಕರಣ, ಉದ್ಯಾನವನ, ನಾಗರೀಕ ಸೌಲಭ್ಯ ಮತ್ತು ಯಾವುದೇ ಇತರ ಮೂಲ ಸೌಕರ್ಯವನ್ನು ತೋರಿಸಿ, ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಉದ್ದೇಶಗಳಿಗಾಗಿ ನಿಯಮಿಸಬಹುದಾದ ಅಂಥ ನಿಯಮಗಳಿಗೆ ಅನುಸಾರವಾಗಿ ವಸತಿ ವಿನ್ಯಾಸ ನಕ್ಷೆಗೆ ಮಂಜೂರಾತಿಯನ್ನು ನೀಡಲಾಗಿದೆ.

5) ಪರಿಷ್ಕೃತ ವಸತಿ ವಿನ್ಯಾಸದಲ್ಲಿ ಬರುವ ಉದ್ಯಾನವನ & ರಸ್ತೆ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ಜಾಗಗಳನ್ನು ದೇವನಹಳ್ಳಿ ಪುರಸಭೆಗೆ ಹಾಗೂ ನಾಗರೀಕ ಸೌಲಭ್ಯ ಪ್ರದೇಶವನ್ನು ಈ ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸತಕ್ಕದ್ದು. ಉದ್ಯಾನವನ & ನಾಗರೀಕ ಸೌಲಭ್ಯ ಪ್ರದೇಶಗಳಿಗೆ Fencing ಅಳವಡಿಸಿ ಸಂರಕ್ಷಿಸತಕ್ಕದ್ದು.

6) ಸಂಬಂಧಪಟ್ಟ ಪ್ರಾಧಿಕಾರದ/ಮಂಡಳಿ/ಇಲಾಖೆಯ ಮೇಲ್ವಿಚಾರಣೆಯ ಅಡಿಯಲ್ಲಿ, ಮೇಲೆ ಹೇಳಲಾದ ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಎಲ್ಲಾ ಅಭಿವೃದ್ಧಿ ಕಾಮಗಾರಿಗಳು ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದಕ್ಕಾಗಿ ಸಂಬಂಧಪಟ್ಟ ಪ್ರಾಧಿಕಾರ/ ಮಂಡಳಿ/ ಇಲಾಖೆಯಿಂದ ಕಾರ್ಯಪೂರ್ತಿ ಪ್ರಮಾಣ ಪತ್ರವನ್ನು ಪಡೆದು ಮತ್ತು ಸ್ಥಳೀಯ ಸಂಸ್ಥೆಗೆ ಉದ್ಯಾನವನ ಹಾಗೂ ರಸ್ತೆ ಪ್ರದೇಶಗಳನ್ನು ಬಿಟ್ಟುಕೊಟ್ಟ ಬಗ್ಗೆ ದಾಖಲೆಗಳನ್ನು ಸಲ್ಲಿಸತಕ್ಕದ್ದು.

7) ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯ ರೀತ್ಯ ಅನುಮೋದನೆ ನೀಡಿದ 02 ವರ್ಷಗಳೊಳಗಾಗಿ ಸಂಪೂರ್ಣವಾಗಿ ಉದ್ಯಾನವನ & ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕಗಳನ್ನು ಅಭಿವೃದ್ಧಿಪಡಿಸತಕ್ಕದ್ದು.

8) ವಸತಿ ವಿನ್ಯಾಸದ ಗಡಿ ನಿರ್ಧಾರ ಮತ್ತು ಅಭಿವೃದ್ಧಿಪಡಿಸುವ ಉದ್ದೇಶಕ್ಕಾಗಿ ಪರಿಷ್ಕೃತ ನಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ನಿವೇಶಗಳನ್ನು ಪರಭಾರೆ ಮಾಡುವುದಾಗಲೀ ಮತ್ತು ಖಾತೆ ತೆರೆಯುವುದಾಗಲೀ ಮಾಡತಕ್ಕದ್ದಲ್ಲ. ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಪಡೆದ ನಂತರ, ವಸತಿ ವಿನ್ಯಾಸದಲ್ಲಿನ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಪೂರ್ವದಲ್ಲಿ ಯೋಜನಾ ಪ್ರಾಧಿಕಾರದಿಂದ ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 15 (1) ರನ್ವಯ ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ಥಳೀಯ ಸಂಸ್ಥೆಯಿಂದ ಅಗತ್ಯ ಕಟ್ಟಡ ಪರವಾನಗಿ ಪಡೆದು ಅನುಮೋದಿತ ಕಟ್ಟಡ ನಕ್ಷೆಯಂತೆಯೇ ಕಟ್ಟಡ ನಿರ್ಮಿಸತಕ್ಕದ್ದು.

9) ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ–2016 ರ ಕಲಂ (3) ಮತ್ತು (4) ರ ರೀತ್ಯ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ದಲ್ಲಿ ಪರಿಷ್ಕೃತ ವಸತಿ ಯೋಜನೆಯ ಪೂರ್ವಭಾವಿ ನೋಂದಣಿಯನ್ನು ಕಡ್ಡಾಯವಾಗಿ ಮಾಡತಕ್ಕದ್ದು.

10) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ Water (Prevention and Control of Pollution) Act 1974 ರ ಕಲಂ 25 ರ ರೀತ್ಯ ಸೂಕ್ತ ಪ್ರಮಾಣದ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಲು Constent for Establishment ಪೂರ್ವಾನುಮತಿ ಪಡೆಯದೇ ಪ್ರಶ್ನಿತ ನಿವೇಶನ / ಜಾಗದಲ್ಲಿ ನೆಲ ಅಗಿಯುವಿಕೆ ಒಳಗೊಂಡಂತೆ ಯಾವುದೇ ರೀತಿಯ ಕಟ್ಟಡ ನಿರ್ಮಾಣ ಅಥವಾ ವಸತಿ ವಿನ್ಯಾಸ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳತಕ್ಕದ್ದಲ್ಲ. ಉದ್ದೇಶಿತ ಕಟ್ಟಡ / ನೆಲ ಅಭಿವೃದ್ಧಿ ಕಾಮಗಾರಿಗಳನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ constent for Establishment ಅನುಮತಿ ಪಡೆಯತಕ್ಕದ್ದು.

11) ಪ್ರಸ್ತಾವಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ನಿವೇಶನದಾರರಿಗೆ ನೀರು ಸರಬರಾಜು, STP/ಸೆಪ್ಟಿಕ್ ಟ್ಯಾಂಕ್ ಮುಂತಾದ ಮೂಲಭೂತ ಸೌಕರ್ಯಗಳನ್ನು ವಸತಿ ವಿನ್ಯಾಸದ ಮಾಲೀಕರು ಒದಗಿಸತಕ್ಕದ್ದು.

12) ಪ್ರಶ್ನಿತ ಜಮೀನುಗಳಲ್ಲಿ ಸರ್ಕಾರಿ ಖರಾಬು ಜಾಗವನ್ನು ಯಥಾವತ್ತಾಗಿ ಕಾಯ್ದಿರಿಸತಕ್ಕದ್ದು ಹಾಗೂ ಈ ಜಾಗವನ್ನು ಒತ್ತುವರಿ ಮಾಡುವುದು ಅಥವಾ ಇತರೆ ಯಾವುದೇ ಉದ್ದೇಶಕ್ಕೆ ಬಳಸತಕ್ಕದ್ದಲ್ಲ.

13) ಅರ್ಜಿದಾರರು ಉದ್ದೇಶಿಸಿರುವ ಜಮೀನುಗಳಲ್ಲಿ ಸರ್ಕಾರದ ಅಥವಾ ಅನ್ಯಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದು ಬಂದಲ್ಲಿ ಅಂತಹ ಸಂದರ್ಭದಲ್ಲಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ

ನಂ. 333/1, ಮೊದಲನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಶಾಂತಿನಗರ, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110
ದೂ. : 080-29566001, 080-27682035 ಇಮೇಲ್ : biaapa.devanahalli@gmail.com ವೆಬ್‌ಸೈಟ್ : www.biaapa.tpa.gov.in

ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಅಧಿಕಾರವುಳ್ಳವರಾಗಿರುತ್ತಾರೆ.

14) ಈ ಅನುಮೋದನೆಯನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17 ರಡಿಯಲ್ಲಿ ನೀಡುತ್ತಿರುವುದರಿಂದ ಇದನ್ನು ಜಮೀನುಗಳ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸತಕ್ಕದ್ದಲ್ಲ.

15) ಪರಿಷ್ಕೃತ ವಸತಿ ವಿನ್ಯಾಸದಲ್ಲಿರುವ ಯಾವುದೇ ನಿವೇಶನಗಳನ್ನು ಉಪವಿಭಜನೆ ಮಾಡಿ ಮಾರಾಟ ಮಾಡತಕ್ಕದ್ದಲ್ಲ, ಒಂದು ವೇಳೆ ಯಾವುದೇ ಬದಲಾವಣೆಯ ಅವಶ್ಯಕತೆ ಇದ್ದಲ್ಲಿ ಪ್ರಾಧಿಕಾರದಿಂದ ಅನುಮತಿ ಪಡೆಯತಕ್ಕದ್ದು. ಈ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಬದಲಾವಣೆಯನ್ನು ಮಾಡಬಾರದು.

16) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರವು ಮುಂದೆ ಸೂಚಿಸಬಹುದಾದ ಎಲ್ಲಾ ತಾಂತ್ರಿಕ ವಿಷಯಗಳಿಗೆ ಹಾಗೂ ಶುಲ್ಕಗಳನ್ನು ತುಂಬುವುದರ ನಿರ್ಣಯಕ್ಕೆ ಅರ್ಜಿದಾರರು ಬದ್ಧರಾಗಿರುವುದು.

17) ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ರಸ್ತೆ, ರಸ್ತೆಬದಿ ಚರಂಡಿ, ಕಲ್‌ವರ್ಟ್‌ಗಳು, ಪಾದಚಾರಿ ಮಾರ್ಗ ಇತ್ಯಾದಿ ಸಿವಿಲ್ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ, ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

18) ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಕಾಮಗಾರಿಗಳನ್ನು ಸಂಬಂಧಿತ ಗ್ರಾಮೀಣ ನೀರು ಸರಬರಾಜು ಇಲಾಖೆಯ/ನಗರ ಸ್ಥಳೀಯ ಸಂಸ್ಥೆಯ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

19) ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ವಿದ್ಯುದ್ಧೀಕರಣೆ ಕಾಮಗಾರಿಗಳನ್ನು ಸಂಬಂಧಿತ ಬೆಸ್ಕಾಂ ಮಂಡಳಿ ಉಸ್ತುವಾರಿಯಲ್ಲಿ ಕಾರ್ಯಗತಗೊಳಿಸಿ ಧೃಢೀಕರಣ ಪತ್ರ ಸಲ್ಲಿಸತಕ್ಕದ್ದು.

20) ಪ್ರಸ್ತಾಪಿತ ಪರಿಷ್ಕೃತ ವಸತಿ ವಿನ್ಯಾಸದಲ್ಲಿ ಘನ ತ್ಯಾಜ್ಯಗಳನ್ನು ಹಸಿತ್ಯಾಜ್ಯ, ಒಣತ್ಯಾಜ್ಯ, ಪ್ಲಾಸ್ಟಿಕ್ ಮತ್ತು ಇತ್ಯಾದಿ ವಿಂಗಡಿಸಿ Compost ಮಾಡಲು ಸೂಕ್ತ ಸ್ಥಳವನ್ನು ಕಾಯ್ದಿರಿಸತಕ್ಕದ್ದು.

21) ಅಭಿವೃದ್ಧಿದಾರರು ಕೊಳಚೆ ನೀರನ್ನು ಬಯಲು ಜಾಗ/ಖಾಲಿ ಜಾಗಗಳಿಗೆ ಬಿಡದೇ ಸಂಸ್ಕರಿಸಿ ಕುಡಿಯುವ ನೀರಿನ ಹೊರತಾಗಿ ಅನ್ಯ ಉದ್ದೇಶಗಳಿಗೆ ಬಳಕೆ ಮಾಡತಕ್ಕದ್ದು.

22) ಅಭಿವೃದ್ಧಿದಾರರು ಪರಿಷ್ಕೃತ ವಸತಿ ವಿನ್ಯಾಸ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡು ಕಡೆ ಗಿಡ/ಮರಗಳನ್ನು ಬೆಳೆಸುವುದು.

23) ಅನುಮೋದಿತ ಪರಿಷ್ಕೃತ ವಸತಿ ವಿನ್ಯಾಸದ ಪ್ರದೇಶದಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ಪರಿಷ್ಕೃತ ವಸತಿ ವಿನ್ಯಾಸ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

24) ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕ-ಪಕ್ಕದ ಜಮೀನುಗಳಿಗೆ ಸಂಪರ್ಕವನ್ನು ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.

25) ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

26) ಪರಿಷ್ಕೃತ ವಸತಿ ವಿನ್ಯಾಸ ಅನುಮೋದನೆ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಗೆ ನೀಡಿರುವ ತಾತ್ಕಾಲಿಕ ಅನುಮೋದನೆ ತಂತಾನೇ ಸ್ವಯಂಚಾಲಿತವಾಗಿ ರದ್ದಾಗುತ್ತದೆ.

27) ಮೇಲಿನಂತೆ ನೀಡಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

28) ನೈಸರ್ಗಿಕವಾಗಿ ಹರಿಯುವ ನದಿ/ಹಳ್ಳ/ಕೆರೆ/ನಾಲಾ ಮುಂತಾದವುಗಳಿಗೆ ವಿನ್ಯಾಸದ ಮಲೀನ ನೀರನ್ನು ಬಿಡಬಾರದು. ಸದರಿ ಪರಿಷ್ಕೃತ ವಸತಿ ವಿನ್ಯಾಸ ನಕ್ಷೆಯಲ್ಲಿ ಸೂಚಿಸಲಾಗಿರುವ ನಾಲಾ ಪ್ರದೇಶಗಳಲ್ಲಿ ರಸ್ತೆ ಪರಿಚಲನೆಯನ್ನು ಮುಂದುವರಿಸುವಾಗ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದು ಕಲ್ವರ್ಟ್ ಕಟ್ಟತಕ್ಕದ್ದು, ಹಾಗೂ ನೀರಿನ ಹರಿವೆಗಾಗಿ ಯಾವುದೇ ಅಡಚಣೆ ಮಾಡತಕ್ಕದ್ದಲ್ಲ, ಹಾಗೂ ಸೂಕ್ತ ಡ್ರೈನೇಜ್ ನಿರ್ಮಿಸಿ ಸಂರಕ್ಷಿಸತಕ್ಕದ್ದು, ಹಾಗೂ ಯಾವುದೇ ಒತ್ತುವರಿ ಮಾಡತಕ್ಕದ್ದಲ್ಲ. ಸರ್ಕಾರದ ಅಧಿಸೂಚನೆ ಸಂ. ಯುಡಿಡಿ15 ಟಿಟಿಪಿ 2015, ದಿನಾಂಕ: 21/04/2020 ರ ರೀತ್ಯ ಜಲಪ್ರದೇಶಗಳ ಬಫರ್ ಜಾಗದಲ್ಲಿ water pumping stations, Walking tracks, Play fields without any building constructions, cycling trucks & Parks ಗಳನ್ನು ಮಾತ್ರ ಅಭಿವೃದ್ಧಿಪಡಿಸತಕ್ಕದ್ದು.

ಅರ್ಜಿದಾರರು ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ಕಾಮಗಾರಿಗಳನ್ನು ಒಟ್ಟಾರೆಯಾಗಿ ಅಭಿವೃದ್ಧಿಪಡಿಸಿದ ನಂತರ, ಅಂತಿಮ ಅನುಮೋದನೆ ನೀಡುವ ಪೂರ್ವದಲ್ಲಿ ರೈಲ್ವೆ ಇಲಾಖೆಯವರು ನೀಡಿರುವ ಆಕ್ಷೇಪಣಾ ರಹಿತ ಪತ್ರದಲ್ಲಿನ ಷರತ್ತು ಸಂಖ್ಯೆ 10 ರಲ್ಲಿ ಸೂಚಿಸಿರುವಂತೆ ರೈಲ್ವೆ ಬೌಂಡರಿಯಿಂದ 30.00 ಮೀ ಅಂತರದೊಳಗೆ ಬರುವ ಎಲ್ಲಾ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣ ಸಂಬಂಧ ರೈಲ್ವೆ ಇಲಾಖೆಯಿಂದ ಪಡೆದ ನಿರಾಕ್ಷೇಪಣಾ ಪತ್ರ, ಪರಿಷ್ಕೃತ ವಸತಿ ವಿನ್ಯಾಸದಲ್ಲಿನ ಉದ್ಯಾನವನ ಹಾಗೂ ರಸ್ತೆಗಳನ್ನು ಸಂಬಂಧಿಸಿದ ಸ್ಥಳೀಯ ಸಂಸ್ಥೆಯಾದ ದೇವನಹಳ್ಳಿ ಪುರಸಭೆಗೆ ಹಾಗೂ ನಾಗರೀಕ ಸೌಲಭ್ಯದ ನಿವೇಶನವನ್ನು ಈ ಪ್ರಾಧಿಕಾರಕ್ಕೆ ನೋಂದಾಯಿತ ಪರಿತ್ಯಾಜನಾ ಪತ್ರಗಳ ಮುಖಾಂತರ ಹಸ್ತಾಂತರಿಸಿ, ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ವಿವಿಧ ಇಲಾಖೆಗಳಿಂದ ಅಂದರೆ ನೀರು ಸರಬರಾಜು, ಒಳಚರಂಡಿ Soak pit, ಮಳೆನೀರು ಸಂಗ್ರಹಣೆ ಘಟಕ (Rain water Harvesting) ಗಳನ್ನು ಅಭಿವೃದ್ಧಿಪಡಿಸಿರುವ ಬಗ್ಗೆ ಹಾಗೂ ರಸ್ತೆ ಕಾಮಗಾರಿಗಳು, ಮಳೆನೀರು ಚರಂಡಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಯಾದ ದೇವನಹಳ್ಳಿ ಪುರಸಭೆಯಿಂದ, ವಿದ್ಯುತ್ ಸರಬರಾಜು ಮಾಡಿರುವ ಬಗ್ಗೆ ಬೆಸ್ಕಾಂನಿಂದ, ಉದ್ಯಾನವನ ಅಭಿವೃದ್ಧಿಪಡಿಸಿರುವ ಬಗ್ಗೆ ತೋಟಗಾರಿಕೆ ಇಲಾಖೆಯಿಂದ ಹಾಗೂ Sewage Treatment Plant (ತ್ಯಾಜ್ಯನೀರು ಸಂಸ್ಕರಣಾ ಘಟಕ) ಸ್ಥಾಪಿಸಿರುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿಯಿಂದ ಪಡೆದ Consent for operation ಪತ್ರ ಮತ್ತು ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಪ್ರಮಾಣ ಪತ್ರ ಹಾಗೂ ಪರಿಷ್ಕೃತ ವಸತಿ ವಿನ್ಯಾಸದಲ್ಲಿ ಮೂಲಭೂತ ಸೌಲಭ್ಯಗಳು ಮತ್ತು ಸಾರ್ವಜನಿಕ ಪ್ರದೇಶಗಳ ನಿರ್ವಹಣೆ ಬಗ್ಗೆ ಸ್ಥಳೀಯ ಸಂಸ್ಥೆಯಿಂದ ಕಾಮಗಾರಿ ಮುಕ್ತಾಯ ಪತ್ರವನ್ನು ಪಡೆದು ಸಲ್ಲಿಸಿ, ಪರಿಷ್ಕೃತ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನ ಬಿಡುಗಡೆಗೆ ಮನವಿ ಸಲ್ಲಿಸತಕ್ಕದ್ದು.

ಲಗತ್ತು:-

ಗಡಿ ನಿರ್ಧಾರ ಮತ್ತು ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಮಾತ್ರ ನೀಡಲಾಗಿರುವ ಪರಿಷ್ಕೃತ ತಾತ್ಕಾಲಿಕ ವಸತಿ ವಿನ್ಯಾಸ ನಕ್ಷೆ.

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ಬೆಂಗಳೂರು ಅಂತರಾಷ್ಟ್ರೀಯ ವಿಮಾನ
ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ,
ದೇವನಹಳ್ಳಿ.

ಇವರಿಗೆ:

M/s Theme Ambience Roi Projects Pvt Ltd,
M/s Prithvi Infrastructure,
M/s Parasmani Developers &
M/s P.B.Metlloy Exim LLP.,
No79, 3rd Floor, City Center Building,
Subramani nagar,
Hebbala outer ring road,
Bengaluru-560024.